**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಿ5(2) ಪಸ.ಮುಂಬಡ್ತಿ:79/2020-21** ದಿನಾಂಕ: 18-08-2021

**::ಅಧಿಸೂಚನೆ ::**

ವಿಷಯ :- ಶ್ರೀ ಬಿ.ಕೃಷ್ಣಮೂರ್ತಿ ನಾಯ್ಕ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕುಂದಾಪುರ, ಉಡುಪಿ.ಜಿಲ್ಲೆ ಇವರಿಗೆ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು(ಬೋಧಕೇತರ) ಹುದ್ದೆಯಿಂದ ಪತ್ರಾಂಕಿತ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿರುವುದನ್ನು ಶಾಶ್ವತವಾಗಿ ರದ್ದುಪಡಿಸಿರುವ ಬಗ್ಗೆ.

ಉಲ್ಲೇಖ :- ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದಿ: 29-01-2008.

2] ಸರ್ಕಾರದ ಆದೇಶ ಸಂಖ್ಯೆ : ಇಡಿ 464 ಡಿಪಿಐ 2008 ದಿ : 06-01-2009.

3] ದಿನಾಂಕ: 26-07-2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡವಳಿಗಳು.

4] ಈ ಕಛೇರಿಯ ಅಧಿಸೂಚನೆ ಸಂಖ್ಯೆ: **ಸಿ5(2) ಪಸ.ಮುಂಬಡ್ತಿ: 79/2020-21 ದಿನಾಂಕ:26-07-2021**.

5] ಬಿ.ಕೃಷ್ಣಮೂರ್ತಿ ನಾಯ್ಕ, ಪತ್ರಾಂಕಿತ ವ್ಯವಸ್ಥಾಪಕರು, ಸಲ್ಲಿಸಿರುವ ಮನವಿ ಪತ್ರದ ದಿನಾಂಕ:26-07-2021

6] ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ:07-08-2021.

7] ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ, ಇವರ ಪತ್ರದ ಸಂಖ್ಯೆ: ಬಿ1/ಪದೋನ್ನತಿ/ಕ್ಷೇ.ಶಿ/01/2021-22 ದಿನಾಂಕ: 09-08-2021.

8] ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ ಇವರ ಪತ್ರದ ಸಂಖ್ಯೆ:ಎ1/ಬೋ.ಸಿ./ಬ.ಕು/01/2021-22 ದಿನಾಂಕ: 31-07-2021.

* * * * * *

**ಪ್ರಸ್ತಾವನೆ:-**

ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಪತ್ರಾಂಕಿತ ಸಹಾಯಕರ ಹುದ್ದೆಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಯಿಂದ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ : 26-07-2021 ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯಲ್ಲಿ ಅರ್ಹ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರುಗಳಿಗೆ ಪತ್ರಾಂಕಿತ ಸಹಾಯಕರಾಗಿ ಮುಂಬಡ್ತಿ ನೀಡಲು ತೀರ್ಮಾನಿಸಿ ದಿನಾಂಕ: 06-08-2021 ರಂದು ಕೌನ್ಸಿಲಿಂಗ್ ಸಹ ನಡೆಸಲಾಯಿತು. ಉಲ್ಲೇಖ [4] ರಲ್ಲಿ ಬಡ್ತಿ ಹೊಂದಿರುವ ಶ್ರೀ.ಬಿ.ಕೃಷ್ಣಮೂರ್ತಿ ನಾಯ್ಕ, ಇವರು ಬಡ್ತಿ ಮುಂದೂಡಲು ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿ, ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು-1977ರ ನಿಯಮ 4ಎ [3] ರಡಿ ನೇಮಕಾತಿ ಪ್ರಾಧಿಕಾರವು ಒಪ್ಪದೆ, ಉಲ್ಲೇಖ [5] ರಲ್ಲಿ ಬಡ್ತಿ ಹೊಂದಿದ ಅಧಿಕಾರಿಗಳಿಗೆ ಸೂಚನೆ ನೀಡಿ ದಿನಾಂಕ:18-08-2021 ರಂದು ನಡೆಯುವ ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಸ್ಥಳವನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಆದಾಗ್ಯೂ ಶ್ರೀ.ಬಿ.ಕೃಷ್ಣಮೂರ್ತಿನಾಯ್ಕ, ಪತ್ರಾಂಕಿತ ವ್ಯವಸ್ಥಾಪಕರು ಇವರು ಉಲ್ಲೇಖ [6] ಮತ್ತು [7] ರಲ್ಲಿ ಮೇಲಧಿಕಾರಿಗಳ ಮುಖಾಂತರ ಲಿಖಿತ ಮನವಿಯನ್ನು ಸಲ್ಲಿಸಿ, ಪತ್ರಾಂಕಿತ ಸಹಾಯಕರಾಗಿ ಮುಂಬಡ್ತಿ ನೀಡಿರುವುದನ್ನು ಹಾಗೂ ಯಾವುದೇ ಬಡ್ತಿಯನ್ನು ಶಾಶ್ವತವಾಗಿ ಪಡೆಯಲು ಇಚ್ಛಿಸುವುದಿಲ್ಲವೆಂದು ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳನ್ನು ನೇಮಕಾತಿ ಪ್ರಾಧಿಕಾರವು ಪರಿಶೀಲಿಸಿ, ಒಪ್ಪಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಆದೇಶ:-**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ. ಬಿ.ಕೃಷ್ಣಮೂರ್ತಿ ನಾಯ್ಕ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕುಂದಾಪುರ, ಉಡುಪಿ ಜಿಲ್ಲೆ ಇವರಿಗೆ ಪತ್ರಾಂಕಿತ ವ್ಯವಸ್ಥಾಪಕರು /

ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಯಿಂದ ಪತ್ರಾಂಕಿತ ಸಹಾಯಕರ ಹುದ್ದೆಗೆ ಉಲ್ಲೇಖ [4] ರಲ್ಲಿ ನೀಡಿರುವ ಮುಂಬಡ್ತಿಯನ್ನು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಶಾಶ್ವತವಾಗಿ ರದ್ದುಪಡಿಸಿ ಆದೇಶಿಸಿದೆ.

**ಷರತ್ತುಗಳು:-**

1. **ಬಡ್ತಿ ಆದೇಶ ಹೊರಡಿಸಿದ ದಿನಾಂಕದಿಂದ ಸದರಿ ಅಧಿಕಾರಿಯು 10,15,20,25,30 ವರ್ಷಗಳ ವೇತನ ಬಡ್ತಿಗಳು, ಹಾಗೂ ಸ್ಥಗಿತ ವೇತನ ಬಡ್ತಿಗಳಿಗೆ ಅರ್ಹರಿರುವುದಿಲ್ಲ.**
2. **ಬಡ್ತಿ ರದ್ದುಪಡಿಸಿದ ಆದೇಶವನ್ನು ಅಧಿಕಾರಿಗೆ ಸಂಬಂದಿಸಿದ ದಾಖಲೆಗಳಲ್ಲಿ ಕೆಂಪು ಶಾಯಿಯಲ್ಲಿ ನಮೂದಿಸಲು ತಿಳಿಸಿದೆ.**

**ವಿ.ಅನ್ಬುಕುಮಾರ್, ಭಾ.ಆ.ಸೇ.,**
**ಆಯುಕ್ತರು**

ಇವರಿಗೆ:

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
02. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ Ink Signed Copy.
03. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ ಅಗತ್ಯ ಕ್ರಮಕ್ಕಾಗಿ,
04. ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕುಂದಾಪುರ, ತಾಲ್ಲೂಕು ಉಡುಪಿ ಜಿಲ್ಲೆ
05. ಸಂಬಂಧಿಸಿದ ಅಧಿಕಾರಿಗಳಿಗೆ,
04. ಕಛೇರಿ ಪ್ರತಿ.